Doc 523
1+P.2

Reg no KRNN 12 — For Influential Publicity — 7-9-76

ಸ್ವಾ ಮತ್ತೋತ್ಸವ ನೆರವೇರಿಸಿ ವಜ್ರಮಹೋತ್ಸವನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60 th Diamond Jubilee Year
60 ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸಂಸ್ಥಾಪಕರು : ಅರಮನೆ ಏರಸ್ಟೇಡಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ 5 ಪೈಸೆ

ನಂ 5111-I / 76-77 23-8-1976

ತಿದುಪಡಿ ನಂ 2

ಹರಾಜು ಪ್ರಕಟಣೆ

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ– ಚಾಮರಾಜನಗರದ ಕಡೆ ರೇಷ್ಮೆ ಇಲಾಖೆಯ ಸಹಾಯಕ ಸಂಚಾಲಕರವರ ಕಛೇರಿಯಲ್ಲಿ ಈ ಕೆಳಗೆ ಕಾಣಿಸಿರುವ ದಿನಾಂಕದಂದು ಪದರಿ ಚಾಮರಾಜನಗರ ರೇಷ್ಮೆ ವಿಭಾಗದ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಗಳಲ್ಲಿ ತಾರೀಖು 1-10-1975 ರಿಂದ 30-6-1976 ರವರೆಗೆ ಸಂಗ್ರಹವಾಗಿರುವ ಚಿಟ್ಟೆ ಹೊರಬಂದ ನಂತರದ ಗೂಡುಗಳನ್ನು ಒಟ್ಟಿರಂಗವಾಗಿ ಹರಾಜು ಮಾಡಲಾಗುತ್ತದೆ ಮತ್ತು ಗೂಡುಗಳ ಪರಿಮಾಣ ಇತ್ಯಾದಿ ವಿವರಗಳು ಈ ಕೆಳಕಂಡಂತಿರುತ್ತವೆ

1 ಗೂಡುಗಳ ವಿವರ – ಚಾಮರಾಜನಗರದ ರೇಷ್ಮೆ ವಿಭಾಗದ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಗಳಲ್ಲಿ ದಿನಾಂಕ 1-10-1975 ರಿಂದ 30-3-1976 ರವರೆಗೆ ಸಂಗ್ರಹವಾಗಿರುವ ಮೈಸೂರು ಜಾತಿ ಮತ್ತು ವಿದೇಶಿ ಜಾತಿಯ ಚಿಟ್ಟೆಗಳು ಹೊರಬಂದ ನಂತರದ ಗೂಡುಗಳು.

2 ಹರಾಜು ತೂಕ – ಎ) ಮೈಸೂರು ಜಾತಿಯಲ್ಲಿ 500 ಕಿಲೋಗ್ರಾಂ ಬಿ ವಿದೇಶಿ ಜಾತಿಯ ವು – 350 ಕಿಲೋ ಗ್ರಾಂ

3 ಹರಾಜು ನಡೆಯುವ ಸ್ಥಳ – ಸಹಾಯಕ ಸಂಚಾಲಕರವರ ಕಛೇರಿ ರೇಷ್ಮೆ ಇಲಾಖೆ, ಚಾಮರಾಜನಗರ ವಿಭಾಗ, ಚಾಮರಾಜನಗರ

4 ಮುಂಗಡವಾಗಿ ಕಟ್ಟಬೇಕಾಗಿರುವ ಮೊಬಲಗು – ಪ್ರತಿಯೊಂದು ಜಾತಿಗೂ ಸೇರಿದಂತೆ ರೂ 1,000-00 ಎರಡು ಜಾತಿಗಳಿಗೂ ಸೇರಿ ರೂ 2,000-00.

6 ಹರಾಜು ನಡೆಯುವ ದಿನಾಂಕ ಮತ್ತು ವೇಳೆ – ತಾರೀಖು 5-10 1976 ನೆ ಧ್ಯಾಹ್ನ 2 ಘಂಟೆ ಹರಾಜು ನಡೆಯುವ ದಿನದಂದು ಮೇಲೆ ವಿವರಿಸಿರುವ ಗೂಡುಗಳನ್ನು ಹರಾಜು ಹೇಗೆ ಮತ್ತು ಯಾವ ರೀತಿಯಲ್ಲಿ ಇರುವುದೋ ಅದರಂತೆ ಬಹಿರಂಗವಾಗಿ ಹರಾಜು ಮಾಡಲಾಗುವುದು.

ವಿಷಯ – ಸಂಕ್ಷಿಪ್ತ ಟೆಂಡರ್ ಪ್ರಕಟಣೆ ನಂ 11/76-77 ತಾ 22-5-76 ಅಪ್ರೋಚ್ ಮತ್ತು ದಾರಿ ಕಟ್ಸ್ ಮತ್ತು ಅವುಗಳ ಲೈನಿಂಗ್ ಮತ್ತು ಇನ್ ಟೇಕ್ ಸ್ಟ್ರಕ್ಚರ್ ಸೇರಿ ಕೃಷ್ಣರಾಜಸಾಗರ ಬಲ ದಡದ ಕಾಲುವೆಯ ಆಫ್ ಟೇಕ್‌ನಲ್ಲಿ ಲೈನಿಂಗ್ ಸೇರಿ ಸುರಂಗ ನಿರ್ಮಾಣ ನಿರ್ವಿಸುವುದಕ್ಕಾಗಿ.

ರೆಫರೆನ್ಸ್ – ಈ ಕಚೇರಿ ಪತ್ರದ ನಂ. ಕೆಬಿಡಿ/ಡಿಬಿ1/ ಆರ್ ಬಿಹೆಚ್ ಎಲ್ 1/ ಟಿಎನ್‌ಡಿ/76-77/2785-99 ತಾರೀಖು 27-5-76

2 ಈ ಕಚೇರಿ ಪತ್ರ ನಂ ಕೆಬಿದಿ/ಡಿಬಿ 1/ಆರ್‌ಬಿಹೆಚ್‌ಎಲ್ 1/ ಟಿಎನ್‌ಡಿ/76-77, 5305-20, ತಾ 15-7-76 – ಮೇಲ್ಕಂಡ ಕೆಲಸಕ್ಕೆ ಟೆಂಡರ್‌ಗಳನ್ನು ಸ್ವೀಕರಿಸುವ ತಾರೀಖು 25-8-76 ರ ಬದಲು 29-9-76 ಕ್ಕೆ ಮುಂದುವರಿದಿದೆ ಮತ್ತು ಟೆಂಡರ್ ಫಾರಂಗಳನ್ನು 16-8-76 ರಿಂದ 20-8-76 ರ ವರೆಗೆ ಕೊಡುವ ಬದಲು 22-9-76 ರಿಂದ 25-9-76 ರ ವರೆಗೆ ಕೊಡಲಾಗುವುದು.

ಟೆಂಡರ್‌ನ ಇತರ ಷರತ್ತುಗಳಲ್ಲಿ ಬದಲಾವಣೆ ಇಲ್ಲ

ಸಹಿ/– ಎಕ್ಸಿಕ್ಯೂಟೀವ್ ಇಂಜಿನಿಯರ್, ಕಬಿನಿ ಕಾಲುವೆ ವಿಭಾಗ, ಮೈಸೂರು–2

ಗೂಡುಗಳ ಕೆಲಸದ ವೇಳೆಯಲ್ಲಿ ಕೆಲಸದ ದಿನಗಳಲ್ಲಿ ಚಾಮರಾಜನಗರದ ರೇಷ್ಮೆ ವಿಭಾಗಕ್ಕೆ ಸೇರಿದ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಯಲ್ಲಿ ಪರೀಕ್ಷಿಸಬಹುದು. ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಹೆಚ್ಚಿನ ವಿವರಗಳನ್ನು ಚಾಮರಾಜನಗರದ ರೇಷ್ಮೆ ಇಲಾಖಾ ಸಹಾಯಕ ಸಂಚಾಲಕರವರ ಕಛೇರಿಯಲ್ಲಿ ಕೆಲಸದ ದಿನಗಳಲ್ಲಿ ಹಾಗೂ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ರೇಷ್ಮೆ ಇಲಾಖೆ ಉಪ ಸಂಚಾಲಕರು. ದಕ್ಷಿಣ ವಲಯ, ಮೈಸೂರು – 4.

ಆಹಾರ ಧಾನ್ಯಗಳ ಬಗೆಗೆ ಕೇಂದ್ರ ನೋಡಿಕೊಳ್ಳುವುದು

ಹೈದರಾಬಾದು — ಆಂಧ್ರ ಪ್ರದೇಶದ ಆಹಾರ ಧಾನ್ಯಗಳ ಬಗೆಗೆ ಕೇಂದ್ರ ನೋಡಿಕೊಳ್ಳುವುದೆಂದು ಕೇಂದ್ರ ವೈಮಾಯ ಸಹಾಯಕ ಮಂತ್ರಿ ಶ್ರೀ ಶಿಂಧೆ ಭರವಸೆ ನೀಡಿರುವರು

★

ಅಮೇರಿಕದ ಆಶ್ರಯ ಅಪೇಕ್ಷಿಸಲಿರುವ ರಷ್ಯದವ

ಹಾಕೋಡಾಟಿ — ಇಲ್ಲಿ ಇಳಿದ ರಷ್ಯಾ ವಿಮಾನ ಪಡೆಯ ಜಾಲಕನೊಬ್ಬನು ತಾನು ಅಮೇರಿಕಾದಲ್ಲಿ ಆಶ್ರಯ ಕೇಳಲಿರುವುದಾಗಿ ತಿಳಿಸಿದನು ಅವನು ಇಳಿದ ವಿಮಾನವು ಎಂ ಐ ಜಿ 25 ಎಂದು ಜಪಾನ್ ರಕ್ಷಣಾ ಅಧಿಕಾರಿಗಳು ಗುರುತಿಸಿದರು.

★

ಮೊಕದ್ದಮೆಗಳು ಹೆಚ್ಚಾಗುತ್ತಿವೆ

ನವ ದೆಹಲಿ — ಕಳೆದ 1 ವರ್ಷದಿಂದ ಹೈಕೋರ್ಟುಗಳಲ್ಲಿ ವಿಚಾರಣೆ ಆಗಬೇಕಾದ ಮೊಕದ್ದಮೆಗಳು ಹೆಚ್ಚುತ್ತಿರುವುದೆಂದು, ಅದೇ ರೀತಿ ನ್ಯಾಯಾಧೀಶರ ಸ್ಥಾನದ ಖಾಲಿಯೂ ಹೆಚ್ಚುತ್ತಿರುವುದಾಗಿ ಹೇಳಲಾಗಿದೆ.

★

ಕೃಷ್ಣರಾಜಸಾಗರದ ನೀರಿನ ಮಟ್ಟ

ಮೈಸೂರು — ಕೃಷ್ಣರಾಜಸಾಗರದ ನೀರಿನ ಮಟ್ಟ ಸೋಮವಾರ ಸಂಜೆ ಗಂಟೆಗೆ ಮಟ್ಟ 124.80 ಆಗಿತ್ತು.

★

ಶ್ರೀ ಇರಾನಿಯವರಿಗೆ ಗೋಲ್ಡ್ ಕಪ್ ನೀಡಿಕೆ

ಮೈಸೂರು — ಭಾನುವಾರ ರೇಸಸ್‌ನಲ್ಲಿ ಎಫ್ ಕೆ ಇರಾನಿ ಗೋಲ್ಡ್ ಕಪ್ ಗೆದ್ದ ಟ್ರೈಡಿಷನ್ ವಹಿಲೀಕರಾದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರಿಗೆ ಶ್ರೀಮತಿ ಶೀಲಾ ಎಫ್. ಇರಾನಿಯವರು ಕಪ್ ಬಹುಮಾನಿಸಿದರು.

★

ಮುಖ್ಯ ಮಂತ್ರಿಗಳವರ ಸಲಹೆ

ಬೆಂಗಳೂರು — ಹಿಂದುಳಿಕೆ ನಿರ್ಧಾರ ಮಾಡಲು ಜಾತಿಯೊಂದೇ ಮುಖ್ಯ ಆಗಿರಬಾರದೆಂದು ಸಮಾರಂಭ ಒಂದನ್ನು ಉದ್ಘಾಟಿಸುತ್ತಾ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್‌ರವರು ತಿಳಿಸಿದರು.

★

ವಿಚಿತ್ರ ವಾರ್ತೆ

ಆಸ್ಟ್ರೇಲಿಯಾದ ಕೆಲವು ಖುಡಕಟ್ಟುಗಳಲ್ಲಿ ಅಳಿಯ ಅತ್ತೆಯನ್ನು ಮಾತಾಡಿಸಬೇಕಾದರೆ ಅತ್ತೆ ಅಳಿಯನ ಮುಖ ನೋಡಬಾರದು ಮತ್ತು ಅಳಿಯನ ಹೆಸರನ್ನು ಹೇಳಬಾರದು.

ಹಣದ ಜಗಳದಲ್ಲಿ ಕೊಲೆ

ಮಂಡ್ಯ— ಕರಿಯಪ್ಪ ತನ್ನ ಪಡ್ಡಕರಿಂದ ಕೆಲ ಕಾಲದ ಹಿಂದೆ ರೂ. 15 ಸಾಲಾ ಪಡೆದಿದ್ದ; ಅವರು ಮೊನ್ನೆ ಚಿಕ್ಕೋನಹಳ್ಳಿಯ ಹೆಂಡದ ಅಂಗಡಿಯಲ್ಲಿ ಸೇರಿದ್ದಾಗ ಇವರನ್ನು ತಮ್ಮ ಹಣ ಕೇಳಿದರು; ಕರಿಯಪ್ಪ ತನ್ನ ತಾಯಿಯಿಂದ ಹಣ ಪಡೆದು ಅವರಿಗೆ ಕೊಟ್ಟನು – ಅದರೂ ಪೂರ್ತಾ ಕುಡಿದಿದ್ದ ಅವರು ಇವನ ಮನೆಗೆ ಹೋಗಿ ಇವನ ಹೆಂಡತಿಯನ್ನು ಈಚೆಗೆ ಎಳೆದುತಂದು ಹೊಡೆದರು; ಕರಿಯಪ್ಪ ಅವಳನ್ನು ಬಿಡಿಸುವುದಕ್ಕೆ ಹೋದಾಗ ಅವರು ಇವನನ್ನು ದೊಡ್ಡ ಕಲ್ಲಿನಿಂದ ಹೊಡೆಯಲು ಇವನು ಸತ್ತು ಹೋದನು - ಪೋಲೀಸು ತನಿಖೆ ನಡೆಯುತ್ತಿದೆ.

ಸಕ್ಕರೆ ಬಿಡುಗಡೆ

ನವದೆಹಲಿ— ಕೇಂದ್ರ ಸರಕಾರವು ಅಕ್ಟೋಬರು ತಿಂಗಳಿಗೆ 3 30 ಲಕ್ಷ ಟನ್ ಸಕ್ಕರೆ ಬಿಡುಗಡೆಗೆ ಆಜ್ಞೆ ಮಾಡಿದೆ

ಸ್ತುತ್ಯ ಕಾರ್ಯ

ಶಿವಮೊಗ್ಗ— ಜನತೆಯ ಒತ್ತಾಯವನ್ನು ಗಮನಿಸಿ, ಹರಿಜನ ಕೇರಿಯಲ್ಲಿ ಸಾರಾಯಿ ಅಂಗಡಿಯನ್ನು ಸ್ಥಳಾಂತರಗೊಳಿಸಲಾಗಿದೆ

ಸೊಸೆಯ ಗ,ಹಚಾರ ನೋಡಿ

ಆಫ್ರಿಕಾದಲ್ಲಿ ಒಂದು ಜನಾಂಗದವರು ಸೊಸೆಯನ್ನು ಸರಪಳಿಯಿಂದ ಕಟ್ಟಿ ಹಾಕುತ್ತಾರಂತೆ.

ಜೂಜಿನ ಕುದುರೆ ಸಾವು

ಮೈಸೂರು — ಶನಿವಾರ ಎರಡನೇ ರೇಸ್‌ನಲ್ಲಿ ಓಡಿದ ಶ್ರೀಮತಿ ಬಾಷುರವರ ಕುದುರೆ ಮುನ್ನಿಂಗ್ಸ್. ಗೆಲ್ಲುವ ಸ್ಥಳಕ್ಕೆ ನಾನೂರು ಮೀಟರು ದೂರದಲ್ಲಿ ಹೃದಯಾಘಾತದಿಂದ ಸತ್ತಿತು.

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

ಗೋರಕ್ಷಣೆ'ಕ್ಕೆ ಸಕಲ ನೆರವು ನೀಡಿ

ಗೋರಕ್ಷಣೆ, ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣ'ವು ತನ್ನ ಬೆಳ್ಳಿ ಹಬ್ಬ ನೆರವೇರಿಸುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, 'ಗೋರಕ್ಷಣ" ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ಸೀಡಬೇಕೆಂದು ವಿನಂತಿಸುತ್ತೇವೆ

'ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು-4

ವುಡ್‌ಲಾಂಡ್ಸ್ 3 9 76 ರಿಂದ

ಅಮೋಘ ಆರಂಭ

ದಸ್ ನಂಬರಿ

ಹಿಂದಿ

ಕಲರ್

ಮನೋಜ್ ಕುಮಾರ್ ಹೇಮಮಾಲಿನಿ
ಪ್ರೇಮನಾಥ್ ಪ್ರಾಣ್‌ಮುಂತಾದವರ ಅಭಿನಯ

ದಿನ 4 ಪ್ರದರ್ಶನಗಳು

ಅಪೆರಾ 3 9 76 ರಿಂದ

ಸೆಕ್ರೆಟರಿ

ಎ. ನಾಗೇಶ್ವರರಾವ್ ವಾಣಿಶ್ರೀ ಅಭಿನಯ

ತೆಲುಗು

ಪ್ರತಿ ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Protect the Cow

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram, Mysore 4